ವಿದ್ಯಾರ್ಥಿಗಳ ಮಾಸಿಕ ಬಸ್ ಪಾಸ್ ದರ

558 - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಗರ ಮತ್ತು ಗ್ರಾಮಾಂತರ ಕೆಎಸ್ಆರ್‌ಟಿಸಿ ಬಸ್‌ಗಳಲ್ಲಿ ವಿದ್ಯಾರ್ಥಿಗಳ ಮಾಸಿಕ ಬಸ್‌ಪಾಸ್ ದರ ಏರಿಕೆಯಿಂದ ಬಡ ಮಧ್ಯಮ ವರ್ಗದ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಹೆಚ್ಚಿಸಲಾಗಿರುವ ದರವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ?*

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ದರ ಹೆಚ್ಚಳವು ಕೇವಲ ಅಲ್ಪ ಪ್ರಮಾಣದಾಗಿರುವುದರಿಂದ ಬಡ ಮಧ್ಯಮ ವರ್ಗದ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಈ ಹೆಚ್ಚಳ ಹೊರೆಯಾಗಲಾರದು. ಪ್ರತಿ ಕಿ.ಮೀ. ಪ್ರಯಾಣಕ್ಕೆ ತಗಲುವ ವೆಚ್ಚದ ಆಧಾರ ಪ್ರಯಾಣ ದರಗಳನ್ನು ನಿಗದಿಸಿ:ಪರಿಷ್ಕರಿಸಲಾಗುತ್ತಿದೆ. ಡೀಜಲ್ ದರ ಹೆಚ್ಚಳವಾದ ಪ್ರಯುಕ್ತ ದಿನಾಂಕ. 5.11.99 ರಿಂದ ಪ್ರಯಾಣ ದರಗಳನ್ನು ಪರಿಷ್ಕರಿಸಲಾಯಿತು. ಆದರೆ, ಅಂದು ಶೈಕ್ಷಣಿಕ ವರ್ಷದ ಮಧ್ಯದ ಅವಧಿಯಾಗಿದ್ದುದರಿಂದ ವಿದ್ಯಾರ್ಥಿಗಳ ಬಸ್ ಪಾಸ್ ದರಗಳನ್ನು ಪರಿಷ್ಕರಿಸಿಲ್ಲ. ಪ್ರಸ್ತುತ ಸಾಲಿನ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳ ಬಸ್ ಪಾಸ್ ದರಗಳನ್ನು ಪರಿಷ್ಕರಿಸಲಾಗಿದೆ.

ಪುನಃ ಡೀಜಲ್ ಬೆಲೆ ಹೆಚ್ಚಾದ ಕಾರಣ ಪ್ರಯಾಣ ದರಗಳನ್ನು ದಿನಾಂಕ 5.10.2000 ರಿಂದ ಪರಿಷ್ಕರಿಸಲಾಗಿದೆ. ಆದರೆ ವಿದ್ಯಾರ್ಥಿಗಳಿಗೆ ನೀಡಲಾದ ಬಸ್‌ಪಾಸ್ ದರಗಳನ್ನು ಪರಿಷ್ಕರಿಸಿಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಾರಿಗೆ ಸಚಿವರು ತುಂಬಾ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ನಗರ ಮತ್ತು ಗ್ರಾಮಾಂತರ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ವಿದ್ಯಾರ್ಥಿಗಳ ಮಾಸಿಕ ಬಸ್‌ಪಾಸ್ ದರ ಏರಿಕೆಯಿಂದ ಬಡ, ಮಧ್ಯಮ ವರ್ಗದ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿರುವುದಕ್ಕೆ ಉತ್ತರವಾಗಿ 'ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ದರ ಹೆಚ್ಚಳವು ಕೇವಲ ಅಲ್ಪ ಪ್ರಮಾಣದ್ದಾಗಿರುವುದರಿಂದ ಬಡ, ಮಧ್ಯಮ ವರ್ಗದ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಈ ಹೆಚ್ಚಳ ಹೊರೆಯಾಗಲಾರದು' ಎಂದಿದ್ದಾರೆ. ನನಗೆ ಗೊತ್ತಿರುವಂತೆ ಕಳೆದ ವರ್ಷ ಒಂದನೇ ತರಗತಿಯಿಂದ ಏಳನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಕೇವಲ ಮೂವತ್ತು ರೂಪಾಯಿಗಳ ಸಂಸ್ಕರಣಾ ದರವೆಂದು ವಿಧಿಸಿ ಅವರಿಗೆ ಬಸ್‌ಪಾಸ್ ವಿತರಿಸುತ್ತಿದ್ದರು. ಆದರೆ, ಇವೊತ್ತು ಸುಮಾರು ಎಂಭತ್ತೈದು

ರೂಪಾಯಿಗಳ ಹೆಚ್ಚಳ ದರವನ್ನು ವಿಧಿಸುತ್ತಿದ್ದಾರೆ. ಅಂದರೆ, ಶೇಕಡ 180ರಷ್ಟು ದರವನ್ನು ಏಕಾಏಕಿ ಹೆಚ್ಚಿಸಿದ್ದರೂ ಈ ಸಂದರ್ಭದಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಕೇವಲ ಅಲ್ಪ ಪ್ರಮಾಣದಲ್ಲಿ ದರ ಹೆಚ್ಚಿಸಲಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಸರ್ಕಾರ ಏಕಾಏಕಿ ಶೇಕಡ 180ರಷ್ಟು ದರವನ್ನು ಏಕೆ ಹೆಚ್ಚಿಸಿದೆ? ಎಂದು ಮಾನ್ಯ ಸಾರಿಗೆ ಮಂತ್ರಿಯವರಲ್ಲಿ ಕೇಳಬಯಸುತ್ತೇನೆ. ಎರಡನೆಯದಾಗಿ, 'ಡೀಸಲ್ ಬೆಲೆ ಹೆಚ್ಚಾದ ಕಾರಣ ದರಗಳನ್ನು ಹೆಚ್ಚಿಸಿದ್ದೇವೆ'. ಎಂದೂ ಉತ್ತರದಲ್ಲಿ ಹೇಳಿದ್ದಾರೆ. ಡೀಸೆಲ್ ದರ ಕೇವಲ ಶೇಕಡ 10ರಿಂದ 12ರಷ್ಟು ಜಾಸ್ತಿಯಾದ ಸಂದರ್ಭದಲ್ಲಿ ಇವೊತ್ತು ವಿದ್ಯಾರ್ಥಿಗಳ ಬಸ್‌ಪಾಸ್ ದರ ಶೇಕಡ 180ರಷ್ಟು ಏಕೆ ಜಾಸ್ತಿಯಾಯಿತು? ಇಷ್ಟು ಪ್ರಮಾಣದಲ್ಲಿ ದರ ಹೆಚ್ಚಿಸುವುದಕ್ಕೆ ಕಾರಣವೇನು? ಇದನ್ನೇಕೆ ಕಡಿಮೆ ಮಾಡಬಾರದು? ಎಂಬುದಕ್ಕೆ ಉತ್ತರವನ್ನು ಮಾನ್ಯ ಸಚಿವರಿಂದ ಕೇಳಬಯಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸದಸ್ಯರ ಗಮನಕ್ಕೆ ಈಗಾಗಲೇ ತಿಳಿದಿರುವಂತೆ ಕಳೆದ ವರ್ಷ ಮತ್ತು ಈ ವರ್ಷ ಡೀಸೆಲ್ ದರದ ಬೆಲೆ ಹೆಚ್ಚಾಗಿದೆ. ಕಳೆದ ವರ್ಷ ಡೀಸೆಲ್ ದರದ ಬೆಲೆ ಹೆಚ್ಚಾದ ಸಂದರ್ಭದಲ್ಲಿ ವಿದ್ಯಾರ್ಥಿಗಳ ರಿಯಾಯಿತಿ ಬಸ್‌ಪಾಸ್ ದರವನ್ನು ನಾವು ಹೆಚ್ಚಿಸಲಿಲ್ಲ. ಶೈಕ್ಷಣಿಕ ವರ್ಷದಿಂದ, ನಾವು ಹಿಂದೆ ಏನು ದರವನ್ನು ನಿಗದಿಪಡಿಸಿದ್ದೆವು, ಆ ದರವನ್ನೇ ಮಾರ್ಚಿ ತಿಂಗಳವರೆಗೂ ಮುಂದುವರೆಸಿ, 2000-2001ನೇ ಇಸವಿಯಿಂದ ಶೇಕಡವಾರು ಮಾಹಿತಿ ಇರುವಂತೆ ಹೆಚ್ಚಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತೆ ಶೇಕಡ 85ರಷ್ಟನ್ನು ನಾವು ಟಿಕೆಟ್ ದರವನ್ನು ಹೆಚ್ಚಿಸುವುದಕ್ಕೆ ಹೋಗಿಲ್ಲ. ಉದಾಹರಣೆಗೆ ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೆ, ನಾವು ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡುತ್ತಿದ್ದೇವೆ. ಮೊದಲು ಇದನ್ನು ಉಚಿತವಾಗಿ ನೀಡುತ್ತಿದ್ದರೂ ಇದರ ಪ್ರೊಸೆಸ್‌ಗಾಗಿ ಬಸ್‌ಪಾಸ್‌ಗಳನ್ನು ಇಶ್ಯೂ ಮಾಡುವಾಗ ವಿದ್ಯಾರ್ಥಿಗಳಿಂದ ಐದು ರೂಪಾಯಿಗಳನ್ನು ಸಂಗ್ರಹಿಸುತ್ತಿದ್ದೇವೆ. ಅದೇ ರೀತಿ ಎಂಟು, ಒಂಭತ್ತು ಮತ್ತು ಹತ್ತನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನಾವು ಹದಿನೈದು ರೂಪಾಯಿಗಳಂತೆ ವಿಧಿಸುತ್ತಿದ್ದೇವೆ, ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾಸಿಕವಾಗಿ ಮೂವತ್ತು ರೂಪಾಯಿಗಳಂತೆ ತೆಗೆದುಕೊಳ್ಳುತ್ತಿದ್ದೇವೆ. ಅಲ್ಲದೆ, ಸಂಜೆ ಕಾಲೇಜುಗಳಲ್ಲಿ ಪಿ.ಎಚ್.ಡಿ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಮಾಹೆಯಾನ ಐವತ್ತು ರೂಪಾಯಿಗಳಂತೆ ಪಡೆಯುತ್ತಿದ್ದೇವೆ. ಆದುದರಿಂದ, ಈ ದಿಸೆಯಲ್ಲಿ ನಾನು ರಾಜ್ಯ ಜನತೆಗೆ ಹಾಗೂ ಶಾಲಾ-ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪತ್ರಿಕೆಗಳ ಮೂಲಕ ಹೇಳಿಕೆ ಕೊಟ್ಟಿದ್ದು, ದಿನಾಂಕ. 5.11.99ರಲ್ಲಿ ಡೀಸೆಲ್ ದರ ಹೆಚ್ಚಾದಾಗ ಬಸ್ಸಿನ ಪ್ರಯಾಣ ದರವನ್ನು ಶೇಕಡ 18ರಷ್ಟು ಮಾತ್ರ ಹೆಚ್ಚಿಸಲಾಗಿದೆಯೆಂದು ಹಾಗೂ ಇತ್ತೀಚೆಗೆ ಹೆಚ್ಚಾದ ಡೀಸೆಲ್ ದರ ಅನ್ವಯ ಕೇವಲ ಶೇಕಡ 7.92ರಷ್ಟು ಮಾತ್ರ ನಾವು ದರವನ್ನು ಹೆಚ್ಚಿಸಿದ್ದೇವೆಂದು ಪ್ರಕಟಿಸಿದ್ದೇನೆ. ಈ ಕುರಿತು ಹಲವಾರು ವಿದ್ಯಾರ್ಥಿ ಸಂಘಟನೆಗಳವರು ನನ್ನಲ್ಲಿಗೆ ಬಂದಿದ್ದು, ಅವರೊಂದಿಗೂ ನಾನು ಚರ್ಚಿಸಿದ್ದೇನೆ. ಡೀಸೆಲ್ ಬೆಲೆ ಹೆಚ್ಚಾಗಿರುವುದರಿಂದ ದರ ಹೆಚ್ಚಿಸುವುದು ಅನಿವಾರ್ಯವಾಗಿರುತ್ತದೆ, ಇದರಿಂದ ನನ್ನ ಸಂಸ್ಥೆಗೆ ಹೆಚ್ಚು ಆದಾಯ ತರಬೇಕೆಂಬ ಉದ್ದೇಶದಿಂದಲ್ಲ. ಡೀಸೆಲ್‌ಗೆ ಖರ್ಚಾಗುವಷ್ಟು ಹಣ ಪ್ರಯಾಣಿಕರಿಂದ ಸಂಗ್ರಹಿಸಬೇಕಾಗಿರುವುದರಿಂದ ಅದಕ್ಕೆ ತಕ್ಕಂತೆ ನಾನು ದರವನ್ನು ಹೆಚ್ಚಿಸಿದ್ದೇನೆಂದು ಈಗಾಗಲೇ ರಾಜ್ಯದ ಜನರಿಗೆ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಹಳ ಸ್ಪಷ್ಟವಾದ ತಿಳಿವಳಿಕೆ ಕೊಟ್ಟಿದ್ದೇನೆ.

ಇತರ ಪ್ರಯಾಣಿಕರಿಗೆ ಬಸ್ ಪ್ರಯಾಣ ದರವನ್ನು ಎಷ್ಟು ಹೆಚ್ಚಿಸಿದ್ದೇವೋ, ಅಷ್ಟು ಪ್ರಮಾಣದಲ್ಲಿ ವಿದ್ಯಾರ್ಥಿ ರಿಯಾಯಿತಿ ಬಸ್‌ಪಾಸ್‌ದರದ ಮೇಲೆ ನಾವು ಹೆಚ್ಚಿಸಿರುವುದಿಲ್ಲವೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಮಂತ್ರಿಗಳು ಉತ್ತರ ಕೊಟ್ಟಿದ್ದು ನನಗೇನೂ ಸಮಂಜಸವೆನಿಸಲಿಲ್ಲ. ಒಂದರಿಂದ ಏಳನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಕೇವಲ ಐದು ರೂಪಾಯಿಗಳನ್ನು ಮಾತ್ರ ವಿಧಿಸುತ್ತಿದ್ದೇವೆಂಬ ಮಾತನ್ನು ಹೇಳಿದ್ದಾರೆ. ಇವೊತ್ತು ಅನೇಕ ಡಿಪೋಗಳಲ್ಲಿ ನೋಡುತ್ತಿರುವಂತೆ ಮೂವತ್ತೈದು ರೂಪಾಯಿಗಳಂತೆ ವಿಧಿಸುತ್ತಿದ್ದಾರೆ. ಈ ಕುರಿತು ನನ್ನ ಹತ್ತಿರ ಮಾಹಿತಿಯಿದ್ದು, ಅದನ್ನು ತಮಗೆ ಕೊಡಲು ಸಿದ್ಧನಿದ್ದೇನೆ. ತಾವು ಹೇಳಿರುವ ಪ್ರಕಾರ ಐದು ರೂಪಾಯಿಗಳನ್ನು ತೆಗೆದುಕೊಳ್ಳದೆ, ಮೂವತ್ತೈದು ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದು, ಇದನ್ನು ಕೂಡ ಇವೊತ್ತು ಎಂಭತ್ತೈದು ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಇದನ್ನು ಸರ್ಕಾರ ಹೆಚ್ಚಿಸಿದೆಯೋ? ಅಥವಾ ಅಧಿಕಾರಿಗಳು ಹೆಚ್ಚಿಸಿದ್ದಾರೋ? ನನಗೆ ಗೊತ್ತಿಲ್ಲ. ಈ ರೀತಿ ಹೆಚ್ಚಿಸಿರುವುದು ಏಕೆ? ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಸಿ. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಒಂದರಿಂದ ಏಳನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಿಸುವ ಸಂದರ್ಭದಲ್ಲಿ ಮುದ್ರಣ ವೆಚ್ಚವೆಂದು ಐದು ರೂಪಾಯಿಗಳನ್ನು ತೆಗೆದುಕೊಳ್ಳುತ್ತೇವೆಂದು ನಾನು ಸಾರಿಗೆ ಮಂತ್ರಿಯಾಗಿ ಈಗಾಗಲೇ ಈ ಕುರಿತು ಪ್ರಕಟಣೆ ಹೊರಡಿಸಿ ಸ್ಪಷ್ಟ ತಿಳಿವಳಿಕೆ ನೀಡಿದ್ದೇನೆ. ಮಾನ್ಯ ಸದಸ್ಯರು ತಿಳಿಸಿರುವಂತೆ ಸಂಸ್ಥೆಯ ಯಾವುದಾದರೂ ಘಟಕಗಳಲ್ಲಿ ಅಥವಾ ಬಸ್ ನಿಲ್ದಾಣಗಳಲ್ಲಿ ಬಸ್ ಪಾಸ್ ವಿತರಿಸುವಾಗ ವಿದ್ಯಾರ್ಥಿಗಳಿಂದ ಹೆಚ್ಚುವರಿ ಹಣವನ್ನು ಅಧಿಕಾರಿಗಳು ಸಂಗ್ರಹಿಸುತ್ತಿದ್ದ ಪ್ರಕರಣಗಳು ನನ್ನ ಗಮನಕ್ಕೆ ಬಂದಲ್ಲಿ ಹಣವನ್ನು ಕೊಡುವುದಷ್ಟೇ ಅಲ್ಲ, ಸಂಬಂಧಪಟ್ಟ ಅಧಿಕಾರಿ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಡೀಸೆಲ್ ದರದ ಏರಿಕೆಯಿಂದಾಗಿ ಈಗಾಗಲೇ ಬಸ್ ಪಾಸ್ ದರವನ್ನು ಹೆಚ್ಚಿಸಲಾಗಿದೆಯೆಂದು ಮಾನ್ಯ ಸಾರಿಗೆ ಸಚಿವರು ಹೇಳಿದ್ದಾರೆ. ಕೇಂದ್ರ ಸರ್ಕಾರ ಈ ದಿಸೆಯಲ್ಲಿ ಕ್ರಮ ಕೈಗೊಂಡಿರುವುದೇನೆಂದರೆ, ಒಟ್ಟಾರೆಯಾಗಿ ತನ್ನ ಬೊಕ್ಕಸಕ್ಕೆ ಬರುವಂಥ ಹಣದಲ್ಲಿ ಮೂರನೇ ಒಂದರಷ್ಟು ಹಣ ಮಾತ್ರ ಜನರ ಮೇಲೆ ವಿಧಿಸಿದ್ದು, ಮೂರನೇ ಎರಡಷ್ಟು ಹಣವನ್ನು ಕೇಂದ್ರ ಸರ್ಕಾರವೇ ಭರಿಸುವಂಥ ನಿರ್ಧಾರವನ್ನು ಕೈಗೊಂಡಿದೆ. ಡೀಸೆಲ್ ಬೆಲೆ ಹೆಚ್ಚಾದಾಗ ಕರ್ನಾಟಕ ರಾಜ್ಯದಲ್ಲಿ ಒಂದು ಲೀಟರ್ ಡೀಸಲ್‌ಗೆ ಶೇಕಡ 24ರಷ್ಟು ಸೆಸ್ ಅನ್ನು ತೆರಿಗೆ ಮೂಲಕ ಸಂಗ್ರಹಿಸಸುತ್ತಿದ್ದೇವೆ. ಅದೇ ರೀತಿ ಕೇಂದ್ರ ಸರ್ಕಾರದ ಮಾದರಿಯಲ್ಲಿ ಕರ್ನಾಟಕದಲ್ಲೂ ಕೂಡ ಶೇಕಡ 23 ತೆರಿಗೆಯಂತೆ ಭರಿಸಿ ಮೂರನೇ ಒಂದಂಶದಷ್ಟು ಮಾತ್ರ ವಸೂಲು ಮಾಡಿ, ಜನರ ಮೇಲೆ ವಿಧಿಸಿ ಬಾಕಿ ಹಣವನನು ಸರ್ಕಾರದಿಂದ ಭರಿಸುವ ಮೂಲಕ ಡೀಸೆಲ್‌ಗೆ ಸ್ವಲ್ಪ ಕಡಿಮೆ ದರವನ್ನು ಏಕೆ ವಿಧಿಸಬಾರದು? ಮತ್ತು ಇದರ ಮೂಲಕ ಕೆ.ಎಸ್.ಆರ್.ಟಿ.ಸಿ. ಬಸ್ ಪ್ರಯಾಣ ದರವನ್ನು ಏಕೆ ಇಳಿಸಬಾರದು? ಎಂದು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ತೆರಿಗೆ ಸಂಗ್ರಹಣೆ ವಿಚಾರದಲ್ಲಿ ನಾನು ಉತ್ತರಿಸುವುದಕ್ಕಾಗುವುದಿಲ್ಲ. ಏಕೆಂದರೆ, ಇದರ ಉಸ್ತುವಾರಿಯನ್ನು ನನ್ನ ನೆಚ್ಚಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಎಸ್.ಎಂ. ಕೃಷ್ಣರವರು ವಹಿಸಿಕೊಂಡಿರುವ ಖಾತೆಯಾಗಿರುವುದರಿಂದ ರಾಜಸ್ವ ಸಂಗ್ರಹಣೆಯನ್ನು ಇಳಿಸುವುದಾಗಲೀ ಅಥವಾ ಬಸ್ ಪ್ರಯಾಣ ದರವನ್ನು ಇಳಿಸುವುದರ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಮುಖ್ಯಮಂತ್ರಿಗಳಿಗೆ ಪ್ರಶ್ನೆ ಕೇಳಿದರೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಮಾಸಿಕ ಬಸ್‌ಪಾಸ್ ದರವನ್ನು ಇಳಿಸುವುಕ್ಕಾಗುವುದಿಲ್ಲವೆಂದು ಮಾನ್ಯ ಸಾರಿಗೆ ಸಚಿವರು ಕಾರಣಗಳನ್ನು ನೀಡಿದ್ದಾರೆ. ಇವೊತ್ತು ಬಸ್‌ಪಾಸ್ ತೆಗೆದುಕೊಂಡು ಬಸ್ಸಿನಲ್ಲಿ ಪ್ರಯಾಣಿಸುವವರು ಮಧ್ಯಮ ವರ್ಗದವರು, ಕೆಳ ಮಧ್ಯಮ ವರ್ಗದವರು, ಮತ್ತು ಬಡ ಕುಟುಂಬದಿಂದ ಬಂದಿರುವವರಾಗಿದ್ದಾರೆ. ಬೆಂಗಳೂರಿನ ಮಟ್ಟಿಗೆ ಹೇಳುವುದಾದರೆ, ಬಸ್‌ಪಾಸ್ ಪಡೆದು ಬಸ್ಸುಗಳಲ್ಲಿ ಪ್ರಯಾಣಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ನಿಮ್ಮ ಸಂಸ್ಥೆಯ ಸಿಬ್ಬಂದಿ ಬಹಳ ತುಚ್ಚವಾಗಿ, ಹೀನಾಯ ರೀತಿಯಲ್ಲಿ ಕಾಣುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಬಸ್ಸಿನಲ್ಲಿ ಆಸನಗಳು ಖಾಲಿಯಿದ್ದರೂ ಅವರು ಅಲ್ಲಿ ಕುಳಿತುಕೊಳ್ಳುವಂತಿಲ್ಲ. ಸಿಬ್ಬಂದಿ ಕೈಯಲ್ಲಿ ಬೆತ್ತ ಹಿಡಿದುಕೊಂಡು ಅದರಲ್ಲಿ ಅವರಿಗೆ ಹೊಡೆದು ಹೀನಾಮಾನವಾಗಿ ಬಯ್ಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ತಮ್ಮ ಸಂಸ್ಥೆಯ ಸಿಬ್ಬಂದಿ ವರ್ತನೆಯಿಂದ ಎಳೆಯ ವಯಸ್ಸಿನ ವಿದ್ಯಾರ್ಥಿಗಳಾದ ಮಕ್ಕಳ ಮೇಲೆ ಯಾವ ರೀತಿಯ ಪರಿಣಾಮಗಳುಂಟಾಗಬಹುದೆಂದು ಯೋಚಿಸಬೇಕು? ಆದುದರಿಂದ, ತಾವು ಬಸ್ಸಿನ ಪ್ರಯಾಣ ದರವನ್ನು ಪರಿಷ್ಕರಿಸುವುದಲ್ಲ, ಬದಲಿಗೆ ಬಸ್ ಸಿಬ್ಬಂದಿ ನಡವಳಿಕೆ ಏನಿದೆ, ಅದನ್ನಾದರೂ ಪರಷ್ಕರಿಸುವುದಕ್ಕೆ ನೀವು ಏನಾದರೂ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸದಸ್ಯರು ಹೇಳಿರುವ ವಿಚಾರ, ನಾನು ಸಾರಿಗೆ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ನನ್ನ ಗಮನಕ್ಕೆ ಬಂದಾಗ ಸಂಸ್ಥೆಯ ಸಿಬ್ಬಂದಿ ವರ್ಗದವರು ತಮ್ಮ ವರ್ತನೆಯನ್ನು ಸರಿಪಡಿಸಿಕೊಳ್ಳುವುದರ ಬಗ್ಗೆ ಆಗಾಗ್ಗೆ ಅವರಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಸಂಸ್ಥೆಯ ಸಿಬ್ಬಂದಿ ವರ್ಗ ಕೆಟ್ಟ ರೀತಿಯಲ್ಲಿ ವರ್ತಿಸಿದಲ್ಲಿ ಶಿಸ್ತಿನ ಕ್ರಮ ಜರುಗಿಸುವುದಲ್ಲದೆ, ಮುಂದೆ ಈ ರೀತಿ ಆಗದಂತೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಮಾನ್ಯ ಸುರೇಶ್ ಕುಮಾರ್ ಹೇಳಿದಂಥ ವಿಚಾರ ಸತ್ಯವಾದುದು. ಇದನ್ನು ಸರಿಪಡಿಸುವ ಬಗ್ಗೆ ನನಗೆ ಆಸಕ್ತಿ ಇದೆ. ನಮ್ಮ ರಾಜ್ಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ರೀತಿಯಾದ ದುರ್ವ್ಯವಹಾರ ಆಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಂ. ಕೃಷ್ಣ ರವರು 'ಸ್ತ್ರೀ ಶಕ್ತಿ' ಎನ್ನತಕ್ಕ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಇಟ್ಟಿದ್ದಾರೆ. ನಾವು ಹೆಣ್ಣು ಮಕ್ಕಳಿಗೆ 'ಯತ್ರ ನಾರಿಯಸ್ತು ಪೂಜ್ಯಂತು ರಮಂತೆ ತತ್ವದೇವತಾ' ಎಂದು ಹೇಳುತ್ತೇವೆ. ಅಕ್ಕನಾಗಿ, ತಂಗಿಯಾಗಿ, ಮಡದಿಯಾಗಿ, ಮಹಾಮಾತೆಯಾಗಿ ಜಗತ್ತನ್ನು ರಂಜಿಸುವ ಹೆಣ್ಣು ಮನುಷ್ಯನ ಬಾಳಿನ ಕಣ್ಣು. ಆ ಕಣ್ಣು ಕಠೋರವಾದ ಹಿಂಸೆಯನ್ನು ಅನುಭವಿಸುತ್ತಿರುವುದನ್ನು ಕೇಳಿದ್ದೇವೆ. ಆದ್ದರಿಂದ ಹೆಣ್ಣು ಮಕ್ಕಳನ್ನು

ಅಮಾನುಷವಾಗಿ ಕಾಣತಕ್ಕ ಬಸ್ಸಿನ ಚಾಲಕರು, ನಿರ್ವಾಹಕರುಗಳನ್ನು ಜೈಲಿಗೆ ಕಳಿಸುವ ಶಿಕ್ಷೆ ಮಾಡಬೇಕು. ತಾವು ಇದನ್ನು ಬಗೆಹರಿಸದಿದ್ದರೆ ಮುಷ್ಕರವನ್ನು ಮಾಡಬೇಕಾಗುತ್ತದೆ. ಎಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಮ್ಮ ಸಂಸ್ಥೆಯಲ್ಲಿ 70 ಸಾವಿರಕ್ಕೂ ಹೆಚ್ಚು ಚಾಲಕ, ನಿರ್ವಾಹಕ ಸಿಬ್ಬಂದಿಗಳು ಇದ್ದಾರೆ. ಆದರೆ ಅವರುಗಳೆಲ್ಲರೂ ಈ ರೀತಿ ವರ್ತನೆ ಮಾಡುತ್ತಾರೆ ಎಂದರೆ ನಾನು ಒಪ್ಪುವುದಿಲ್ಲ. ಕೆಲವರು ಮಾಡುತ್ತಾರೆ ಎಂಬುದನ್ನು ಒಪ್ಪುತ್ತೇನೆ. ಇಂಥ ದುರ್ವ್ಯವಸ್ಥೆಯೇನಿದೆ ಇದನ್ನು ಸರಿಪಡಿಸುವಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಇದಕ್ಕೆ ತಮ್ಮ ಸಹಕಾರ ಸಹ ಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಬಸ್‌ಪಾಸ್ ಹೊಂದಿರುವವರು ಪಾಪ ಮಾಡಿದವರು ಎಂಬ ಕಲ್ಪನೆಯನ್ನು ದೂರ ಮಾಡಿ ಸಾಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಆಗಲಿ, ಮಾಡುತ್ತೇನೆ.

ಕುಂದಾಪುರ ತಾ. ಗ್ರಾಮ ಕರಣಿಕರನ್ನು ಭರ್ತಿ ಮಾಡುವುದು

559 - ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕುಂದಾಪುರ ತಾಲ್ಲೂಕಿನಲ್ಲಿ ಖಾಲಿ ಇರುವ ಗ್ರಾಮಕರಣಿಕರ ಸಂಖ್ಯೆ ಎಷ್ಟು?*
2. *ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಖಾಲಿ ಇರುವ ಗ್ರಾಮಕರಣಿಕರ ಸಂಖ್ಯೆ ಎಷ್ಟು?*
3. *ಇದನ್ನು ಭರ್ತಿ ಮಾಡಲಾಗುವುದೇ?*

ಶ್ರೀ ಹೆಚ್. ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

1. 36.
2. 19.
3. ಮಿತವ್ಯಯ ಆದೇಶವು ಜಾರಿಯಲ್ಲಿ ಇರುವುದರಿಂದ ನೇರನೇಮಕಾತಿಗಳನ್ನು ಭರ್ತಿ ಮಾಡಲು ಅವಕಾಶವಿರುವುದಿಲ್ಲ.

ಶ್ರೀ ಗೋಪಾಲ ಪೂಜಾರಿ. ಕೆ. : ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ 76 ಗ್ರಾಮ ಕರಣಿಕರ ಹುದ್ದೆ ಮಂಜೂರಾಗಿದ್ದು ಅದರಲ್ಲಿ ಇಂದು 36 ಹುದ್ದೆಗಳು ಖಾಲಿ ಇವೆ. ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ನೇರ ನೇಮಕಾತಿ ಮಾಡಲು ಆಗುವುದಿಲ್ಲವೆಂದು ತಿಳಿಸಿರುತ್ತಾರೆ. ಗ್ರಾಮಗಳಲ್ಲಿ ಗ್ರಾಮ ಕರಣಿಕರ ಅವಶ್ಯಕತೆ ಬಹಳವಾಗಿ ಇದೆ. ಗ್ರಾಮ ಕರಣಿಕರಿಂದ ಯಾವುದೇ ಕೆಲಸಕ್ಕೆ ಶಿಫಾರಸ್ಸನ್ನು ಪಡೆಯಲು ಜನರು ನಾಲ್ಕಾರು ದಿವಸ ಕಾಯಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಗ್ರಾಮ ಕರಣಿಕರರ ನೇಮಕಾತಿಯನ್ನು ಎಷ್ಟು ದಿವಸಗಳಲ್ಲಿ ಮಾಡುತ್ತಾರೆ ಎಂಬ ಬಗ್ಗೆ ಹೇಳಬೇಕು.